ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ
ಮುಖ್ಯಮಂತ್ರಿಗಳವರು ಶ್ರೀ ಹೆಚ್.ವಿ. ಕಾಂತಯ್ಯ, MLA ರವರ ಬಗ್ಗೆ ಆಡಿದ ಮಾತಿನ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಿನ್ನೆ ದಿನ ಮುಖ್ಯಮಂತ್ರಿಗಳೇನು ಅವಹೇಳನಕರವಾದಂಥ ಮಾತುಗಳನ್ನಾಡಿದ್ದಾರೆ ಅದರ ಬಗ್ಗೆ ಅವರು ಕ್ಷಮೆಯನ್ನು ಕೇಳಬೇಕು. ಇಲ್ಲದಿದ್ದರೆ ಸಭೆಯ ಕಾರ್ಯಕಲಾಪಗಳು ನಡೆಯಲು ಸಾಧ್ಯವಿಲ್ಲ. ಸಭಾನಾಯಕರಾಗಿ ಆ ರೀತಿಯಾಗಿ ವರ್ತನೆ ಮಾಡಿರತಕ್ಕಂಥದ್ದು, ಅಂಥ ಘಟನೆ ಇತಿಹಾಸದಲ್ಲಿ ಎಂದೂ ನಡೆದಿಲ್ಲ. ಮಾನ್ಯ ವಿಕಾಂತಯ್ಯನವರು ರಾಜೀನಾಮೆಯನ್ನು ಕೊಡುವ ಮಟ್ಟಕ್ಕೆ ಹೋಗಿದ್ದಾರೆ, ಕಣ್ಣೀರನ್ನಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಎಲ್ಲಾರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮುಖ್ಯಮಂತ್ರಿಗಳು ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಕಾರ್ಯಕಲಾಪಗಳನ್ನು ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಈ ಸದನದ ಮೇಲೆ ನಮಗೆ ಗೌರವವಿದೆ; ಅಲ್ಲಿ ಯಾವುದೇ ಅನ್‌ಪಾರ್ಲಿಮೆಂಟರಿ ಪದಗಳು ಇರಲಿಲ್ಲ. ನಾವು ಬಹಳ ನೊಂದಿದ್ದೇವೆ, 2-3 ದಿನಗಳಿಂದ ಮುಖ್ಯಮಂತ್ರಿಗಳ 12 ಅಂಶಗಳ ಫಾರ್ಮುಲದ ಬಗ್ಗೆ ನಮಗೆ ಗೊತ್ತಿಲ್ಲ, ಅವರ ಹತ್ತಿರ ಯಾವ ಟಾನಿಕ್ ಇದೆಯೋ ನಮಗೆ ಗೊತ್ತಿಲ್ಲ. ನರಸಿಂಹರಾಯರ ಹೆಸರನ್ನೇಳಿದರೆ ನಮಗೆ ಸಿಟ್ಟು ಬರುತ್ತದೆ. ನಾವು ಸರ್ಕಾರದ ನೀತಿಯನ್ನು ವಿರೋಧಿಸಿ ಬಾವಿಯೊಳಕ್ಕೆ ಹೋಗುತ್ತಿದ್ದೇವೆ.

(ಗೊಂದಲ)

(ಮಾನ್ಯ ವಿಕಾಂತಯ್ಯ, ಶ್ರೀ ವಾಟಾಳ್ ನಾಗರಾಜ್, ಶ್ರೀ ಯಡಿಯೂರಪ್ಪ, ಶ್ರೀ ಈಶ್ವರಪ್ಪ, ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಮತ್ತು ಇತರ ವಿರೋಧ ಪಕ್ಷದ ಸದಸ್ಯರು ವೆಲ್ಲಲ್ಲಿ ಧರಣಿ ನಡೆಸುತ್ತಿದ್ದರು)

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಸಭೆಯ ಕೊನೆಯಲ್ಲೂ ಕೂಡ ಸಭಾನಾಯಕರಲ್ಲಿ ಅಪೀಲ್ ಮಾಡಿಕೊಂಡೆ, ನೀವು ಎಮೋಷನಲ್ ಆದರೆ ಸಭೆ ನಡೆಸುವುದು ಕಷ್ಟ ಎನ್ನುವಂತಹ ಮಾತನ್ನು ಹೇಳಿದೆ. ನಾವು ಹೊರಗಡೆ ಹೋದ ಮೇಲೂ ಕೂಡ ಮಾಡಿರುವಂತಹ ಪದ ಪ್ರಯೋಗಗಳು ಇದೆಯಲ್ಲಾ, "ಒಬ್ಬ ಸದಸ್ಯರು ಅಳುತ್ತಾ ಕುಳಿತದ್ದನ್ನು ನೆಪ ಮಾಡಿ ಸಭಾತ್ಯಾಗ ಮಾಡುವುದು ಸರಿಯಲ್ಲ; ಅಳುವ ಅಸ್ತ್ರ ಬಳಕೆಯಾಗಬಾರದು" ಎಂದು ಹೇಳಿದ್ದಾರೆ. ಯಾವ ಕಾರಣಕ್ಕಾಗಿ ಆ ಸದಸ್ಯರು ಅಷ್ಟು ನೊಂದು ಕೊಂಡಿದ್ದರು ಎಂಬ ಭಾವನೆ ಕೂಡ ಇವರಿಗೆ ಅರ್ಥವಾಗದೇ ಇದ್ದರೆ, ಇಲ್ಲಿ ನಾನು ಮೊದಲು ಏನು ಹೇಳಿದೆ ಅದನ್ನೇ ಇಂಗ್ಲೀಷ್‌ನಲ್ಲಿ ಹೇಳಿದ್ದೆ.

"Weeping cannot be used as a weapon in the Houe. If emotions start dictating terms, it is very difficult to conduct the business."

This is exactly what I said, referring to his conduct. He became so emotional yesterday referring to his conduct. I appealed to him. Despite the fact.